<u>ದಿಃ **28.10.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಶ್ರೀ.ವಿ.ಕೆ.ಕೆ ವಕೀಲರಿಂದಃ **1** ನೇ ಪ್ರತಿವಾದಿಯ ಪರವಾಗಿಃ</u>

**9).** ಈ ದಾವೆಯನ್ನು ದಾಖಲುಪಡಿಸಲು ನನ್ನ ತಾಯಿಯಾದಂತಹ ಜಯಶ್ರೀ ಗಂಡ ರಾಮಚಂದ್ರ ಮಾಳವದೆ ಇವರು ಕೊಟ್ಟಿರುತ್ತಾರೆ. ರಾಮಚಂದ್ರ ಮಾಳವದೆ ಇವರಿಗೆ 5 ಜನ ಮಕ್ಕಳು ಇರುತ್ತಾರೆ. ರಾಮಚಂದ್ರ ಇವರಿಗೆ ಯಾವುದೇ ರೀತಿ ಪಿರ್ತಾರ್ಜಿತ ಆಸ್ತಿಗಳು ಇರಲಿಲ್ಲ ಅಂದರೆ ಸರಿ. ರಾಮಚಂದ್ರ ಇವರ ಮೊದಲನೇಯ ಮಗನ ಹೆಸರು ಪ್ರಕಾಶ ಅಂತಾ ಇರುತ್ತದೆ, ಆತನು 1 ನೇ ಪ್ರತಿವಾದಿಯ ಗಂಡನಾಗಿರುತ್ತಾನೆ. ರಾಮಚಂದ್ರ ಈತನು ಮಿಠಾಯಿ ಅಂಗಡಿಯನ್ನು ಇಟ್ಟು ವ್ಯಾಪಾರ ಮಾಡುತ್ತಿದ್ದನು. ಸದರಿ ರಾಮಚಂದ್ರ ಈತನು ಬಾಡಿಗೆ ಕಟ್ಟಡದಲ್ಲಿ ಮಿಠಾಯಿ ಅಂಗಡಿಯನ್ನು ಇಟ್ಟು ವ್ಯಾಪಾರ ಮಾಡುತ್ತಿದ್ದನು ಅಂದರೆ ಸರಿ.

**10)** ನನ್ನ ಅಣ್ಣನಾದ ಪ್ರಕಾಶ ಈತನು ರೇಡಿಯೋ ರಿಪೇರಿಗಳನ್ನು ಮಾಡುತ್ತಿದ್ದನು ಅಂದರೆ ಸರಿ. ಸದರಿ ನನ್ನ ಅಣ್ಣನಾದ ಪ್ರಕಾಶ ಈತನು ರೇಡಿಯೋ ರಿಪೇರಿಗಳನ್ನು ಬಾಡಿಗೆ ಅಂಗಡಿಯಲ್ಲಿ ಮಾಡುತ್ತಿದ್ದನು ಅಂದರೆ ಸರಿ. ಅದೇ ರೀತಿ ನನ್ನ ಅಣ್ಣನಾದ ಪ್ರಕಾಶ ಈತನ ಜೊತೆ ನನ್ನ ತಮ್ಮನಾದ ಸತೀಶ ಕೂಡ ಅವನ ಜೊತೆ ರೇಡಿಯೋ ರಿಪೇರಿ ಕೆಲಸ ಮಾಡುತ್ತಿದ್ದನು. ನನ್ನ ಅಣ್ಣನಾದ ಪ್ರಕಾಶ ಈತನು ನನ್ನ ಒಟ್ಟು ಕುಟುಂಬದ ಎಲ್ಲ ಹಣಕಾಸಿನ ವ್ಯವಹಾರಗಳನ್ನು ಮತ್ತು ಇನ್ನಿತರೇ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ ಅಂದರೆ ಸರಿಯಲ್ಲ. ಆದರೆ ನಾನು ಸಹ ನನ್ನ ಒಟುಟ ಕುಟುಂಬದ ನಿರ್ವಹಣೆ ಮಾಡುತ್ತಿದ್ದೆ. ನಾನು ಹಾವೇರಿ ಪಟ್ಟಣದಲ್ಲಿ ವಾಚ ರಿಪೇರಿ ಅಂಗಡಿ ಇಟ್ಟುಕೊಂಡು ಜೀವನ ನಡೆಸುತ್ತಿದ್ದೆ. ಮೊದಲು ನಾನು ವಾಚ್ ರಿಪೇರಿ ಕೆಲಸವನ್ನು ಹಾವೇರಿಯಲ್ಲಿ ಬಾಡಿಗೆ ಅಂಗಡಿಯಲ್ಲಿ ಮಾಡುತ್ತಿದ್ದೇನು. ಈಗ ನಾನು ನನ್ನ ಸ್ವಂತ ಕಟ್ಟಡದಲ್ಲಿ ವಾಚ್ ರಿಪೇರಿ ಕೆಲಸವನ್ನು ಮಾಡಿಕೊಂಡು ಬರುತ್ತಿದ್ದೇನೆ. ನನ್ನ

ಅಣ್ಣನಾದ ಪ್ರಕಾಶ ಮತ್ತು ನನ್ನ ವಯಸ್ಸಿನ ಅಂತರ 2 ವರ್ಷ ಇರುತ್ತದೆ. ಮೊದಲಿಗೆ ನಾನು ಹಾವೇರಿಯ ಪಟ್ಟಣದ ನಗರಸಭೆ ಕಟ್ಟಡದಲ್ಲಿ ವಾಚ್ ರಿಪೇರಿ ಅಂಗಡಿಯನ್ನು ನಡೆಸುತ್ತಿದ್ದೆ ಎಂದು ತೋರಿಸಲು ಈ ದಾವೆಯಲ್ಲಿ ಯಾವುದೇ ದಾಖಲಾತಿ ಹಾಜರುಪಡಿಸಿರುವದಿಲ್ಲ.

**11)** ನನ್ನ ತಾಯಿಯಾದಂತಹ ಜಯಶ್ರೀ ಈಕೆಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಲು ಆಗುವದಿಲ್ಲ ಎಂದು ನನ್ನ ತಾಯಿ ಜಯಶ್ರೀ ಈಕೆ ನನಗೆ ಅಧಿಕಾರ ಪತ್ರವನ್ನು ಬರೆದುಕೊಟ್ಟಿದ್ದಾಳೆ, ಸದರಿ ನನ್ನ ತಾಯಿ ಜಯಶ್ರೀ ಇವರಿಗೆ ಆರೋಗ್ಯ ಸರಿ ಇಲ್ಲದಕ್ಕೆ ಸಂಬಂದಪಟ್ಟ ದಾಖಲಾತಿಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವದಿಲ್ಲ. ನನ್ನ ತಾಯಿ ಜಯಶ್ರೀ ಈಕೆಗೆ ಯಾವುದೇ ರೀತಿ ಖಾಯಿಲೆಗಳು ಇರುವದಿಲ್ಲ ಮತ್ತು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳುವಂತಹ ಶಕ್ತಿ ನನ್ನ ತಾಯಿಗೆ ಇರುತ್ತದೆ ಅಂದರೆ ಸರಿಯಲ್ಲ. ನನ್ನ ತಾಯಿಯಾದ ಜಯಶ್ರೀ ಈಕೆಯ ಆರೋಗ್ಯ ಸರಿ ಇರದ ಕಾರಣ ಆಕೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಲು ಆಗುವದಿಲ್ಲ ಎಂದು ಆದ ಕಾರಣ ನನ್ನ ತಾಯಿ ಜಯಶ್ರೀ ಇವರು ನನಗೆ ಅಧಿಕಾರ ಪತ್ರ ಬರೆದುಕೊಟ್ಟು ನನ್ನ ತಾಯಿ ಈ ನ್ಯಾಯಾಲಯಕ್ಕೆ ಬಂದು ಸರಿಯಾದ ಉತ್ತರ ಕೊಡುತ್ತಿದ್ದಳು ಆದ್ದರಿಂದ ನಾನು ಅದನ್ನು ತಪ್ಪಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**12)** ನನ್ನ ತಾಯಿ ಜಯಶ್ರೀ ಈ ಪ್ರಕರಣದಲ್ಲಿ ಕಾಣಿಸಿದಂತಹ ಸರ್ವೆ ನಂಬರಗಳು ಮತ್ತು ಅವುಗಳು ನಮಗೆ ಹೇಗೆ ಸಂಬಂದಪಟ್ಟಿರುತ್ತವೆ ಎಂದು ನನಗೆ ಸ್ಪಷ್ಟವಾಗಿ ಹೇಳಲು ಬರುವದಿಲ್ಲ. ದಾವಾ ಆಸ್ತಿಗಳ ಚೆಕ್ಕಬಂದಿಗಳನ್ನು ನನಗೆ ನಿಖರವಾಗಿ ಹೇಳಲು ಬರುವದಿಲ್ಲ. ದಾವಾ ಆಸ್ತಿಗಳ ಕುರಿತಾಗಿ ನನಗೆ ಸಂಪೂರ್ಣ ಮಾಹಿತಿ ಇರುವದಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು 1 ನೇ ಪ್ರತಿವಾದಿ ಸುನಿತಾ ಈಕೆ ಖರೀದಿಗೆ ತೆಗೆದುಕೊಂಡಿರುತ್ತಾಳೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸುನೀತಾ ಖರೀದಿ ಮಾಡಿದ ಆಸ್ತಿಗಳ ಸರ್ವೆ ನಂಬರಗಳು ನನಗೆ ಗೊತ್ತಿರುತ್ತದೆ, ಆ ಕುರಿತಾಗಿ ನಾನು 1 ನೇ ಪ್ರತಿವಾದಿ

ಸುನೀತಾ ಈಕೆಗೆ ಸಂಬದಪಟ್ಟ ಆಸ್ತಿಗಳು ಸರ್ವೆ ನಂಬರಃ 173/ಬಿ-3 ಅಂತಾ ಇರುತ್ತದೆ. ಸದರಿ ದಾವಾ ಆಸ್ತಿಯ ಚೆಕ್ಕಬಂದಿಗಳನ್ನು ಸ್ಪಷ್ಟವಾಗಿ ಹೇಳಲು ಬರುವದಿಲ್ಲ.

**13)** ದಾವಾ ಆಸ್ತಿಯನ್ನು 1 ನೇ ಪ್ರತಿವಾದಿ ಸುನೀತಾ ಈಕೆಗೆ ನನ್ನ ಅಣ್ಣ ಪ್ರಕಾಶ ಈತನು ಖರೀದಿಗೆ ಕೊಟ್ಟಿರುತ್ತಾನೆ ಎನ್ನುವ ವಿಷಯ ನನಗೆ ಗೊತ್ತಿರುತ್ತದೆ. ಯಾವ ದಿನಾಂಕ ಮತ್ತು ಇಸ್ವಿಯಂದು 1 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವದಿಲ್ಲ. ನನ್ನ ಅಣ್ಣ ಪ್ರಕಾಶ ಈತನು 1 ನೇ ಪ್ರತಿವಾದಿ ಸುನೀತಾ ಈಕೆಗೆ ದಾವಾ ಆಸ್ತಿಯನ್ನು ಖರೀದಿ ಕೊಡುವಾಗ ನಾನು ಹಾಜರಿರಲಿಲ್ಲ. ದಾವಾ ಆಸ್ತಿಯನ್ನು ನನ್ನ ಅಣ್ಣ ಪ್ರಕಾಶ 1 ನೇ ಪ್ರತಿವಾದಿ ಸುನೀತಾ ಈಕೆಯ ಹೆಸರಿನಲ್ಲಿ ಖರೀದಿಗೆ ತೆಗೆದುಕೊಂಡಿರುತ್ತಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**14)** ನನ್ನ ಅಣ್ಣ ಪ್ರಕಾಶ ಮತ್ತು 1 ನೇ ಪ್ರತಿವಾದಿ ಸುನೀತಾ ಈಕೆ ಇಬ್ಬರೂ ಕೂಡಿ ತಮ್ಮ ಸ್ವಂತ ಗಳಿಕೆಯಿಂದ ಖರೀದಿ ಹಿಡಿದುಕೊಂಡು ನಂತರ ನನ್ನ ಅಣ್ಣ ಪ್ರಕಾಶ ಈತನು 1 ನೇ ಪ್ರತಿವಾದಿ ಸುನೀತಾ ಈಕೆಗೆ ವಾಸವಾಗಿರಲು ಮತ್ತು ಅದರಲ್ಲಿ ಇದ್ದು ಉಪಜೀವನ ಮಾಡಲು ಖರೀದಿ ಮಾಡಿಕೊಟ್ಟಿರುತ್ತಾನೆ ಅಂದರೆ ಸರಿಯಲ್ಲ. ಈ ವಿಷಯ ನನಗೆ ಸಂಪೂರ್ಣ ಗೊತ್ತಿದ್ದರೂ ಸಹ ನಾನು 1 ನೇ ಪ್ರತಿವಾದಿ ಸುನೀತಾ ಈಕೆಯ ಅಸ್ತಿಯನ್ನು ಎತ್ತಿ ಹಾಕಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಯಾದಂತಹ ಸುನೀತಾ ಈಕೆಯ ಸಂಬಂದಪಟ್ಟ ಆಸ್ತಿಯ ಪೂರ್ವ ದಿಕ್ಕಿಗೆ ಯಾರ ಆಸ್ತಿ ಇರುತ್ತದೆ ಎಂದು ನನಗೆ ಗೊತ್ತಿರುವದಿಲ್ಲ. 1 ನೇ ಪ್ರತಿವಾದಿ ಈಕೆ ಖರೀದಿಗೆ ತೆಗೆದುಕೊಂಡ ಆಸ್ತಿಯ ಪೂರ್ವ ದಿಕ್ಕಿಗೆ ಮಹಾರಾಜಪೇಟ ಇವರು ಖರೀದಿಗೆ ತೆಗೆದುಕೊಂಡ ಆಸ್ತಿ ಇರುತ್ತದೆ ಅಂದರೆ ಸರಿಯಲ್ಲ. ಸುನೀತಾ ಈಕೆ ಖರೀದಿ ಹಿಡಿದಂತಹ ಆಸ್ತಿಯಲ್ಲಿ ಗೀತಾ ಈಕೆ ಪ್ರಸುತ್ತವಾಗಿ

ವಾಸವಾಗಿದ್ದಾಳೆ ಅಂದರೆ ಸರಿಯಲ್ಲ. ಸುನೀತಾ 1 ನೇ ಪ್ರತಿವಾದಿ ಈಕೆಯ ಆಸ್ತಿಯ ಪಶ್ಚಿಮ ದಿಕ್ಕಿಗೆ ಖುಲ್ಲಾ ಜಾಗೆ ಇರುತ್ತದೆ.

**15)** ಸುನೀತಾ ಈಕೆಯ ಆಸ್ತಿಯ ಪಶ್ಚಿಮ ದಿಕ್ಕಿಗೆ ಪಾಟೀಲ ಎನ್ನುವವರಿಗೆ ನನ್ನ ಅಣ್ಣನಾದ ಪ್ರಕಾಶ ಈತನು ದಾವಾ ಆಸ್ತಿಯನ್ನು ಖರೀದಿ ಒಪ್ಪಂದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾನೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸುನೀತಾ ಈಕೆ ಖರೀದಿ ಹಿಡಿದಂತಹ ಆಸ್ತಿಯ ಮೇಲೆ ಹುಬ್ಬಳ್ಳಿಯಲ್ಲಿರುವಂತಹ ಐಶ್ವರ್ಯ ಕೋ ಆಪರೇಟಿವ್ ಸೊಸೈಟಿ ಬೋಜಾ ಇರುತ್ತದೆ ಅಂದರೆ ಸರಿ. 1 ನೇ ಪ್ರತಿವಾದಿ ಸುನೀತಾ ಈಕೆ ಖರೀದಿ ಹಿಡಿದಂತಹ ಆಸ್ತಿಯನ್ನು ಐಶ್ವರ್ಯ ಕೋ ಆಪರೇಟಿವ್ ಬ್ಯಾಂಕಿನವರು ಸದರಿ ಆಸ್ತಿಯ ಮೇಲೆ ಸದರಿ ಆಸ್ತಿಯನ್ನು ಹರಾಜಿಗೆ ಹಾಕಲು ಹುಬ್ಬಳ್ಳಿಯ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿರುತ್ತದೆ ಅಂದರೆ ಸರಿ. ಸದರಿ ದಾವೆಯಲ್ಲಿ ಪ್ರಕಾಶ ಈತನು ಪಡೆದುಕೊಂಡಂತಹ ಸಾಲವನ್ನು ಸುನೀತಾ ಮತ್ತು ಅವರ ತಾಯಿ ವಾದಿ ಜಯಲಕ್ಷ್ಮೀ ಇಬ್ಬರೂ ಕೂಡಿ ಮರುಪಾವತಿ ಮಾಡಬೇಕು ಎಂದು ಸದರಿ ದಾವೆಯಲ್ಲಿ ಆದೇಶ ಆಗಿರುತ್ತದೆ ಅಂದರೆಸ ರಿಯಲ್ಲ.

**16)** 1 ನೇ ಪ್ರತಿವಾದಿ ಈಕೆ ಖರೀದಿ ಹಿಡಿದಂತಹ ದಾವಾ ಆಸ್ತಿಯು ಆಕೆಯು ಸ್ವಂತ ಹಣದಿಂದ ಖರೀದಿ ಹಿಡಿದ ಆಸ್ತಿಯಾಗಿರುತ್ತದೆ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರಸುತ್ತವಾಗಿರುವಂತಹ ಗೀತಾ ಈಕೆ 1 ನೇ ಪ್ರತಿವಾದಿ ಮತ್ತು ನನ್ನ ಅಣ್ಣನಾದ ಪ್ರಕಾಶ ಇವರ ಕಡೆಯಿಂದ ಖರೀದಿ ಒಪ್ಪಂದ ಕರಾರುಪತ್ರ ಬರೆಯಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ಸದರಿ ಖರೀದಿ ಕರಾರು ಪತ್ರವನ್ನು ನಾನು ನೋಡಿರುತ್ತೇನೆ. ಸದರಿ ಖರೀದಿ ಕರಾರು ಪತ್ರಕ್ಕೆ ನಾನು ಕೂಡ ಸಹಿ ಮಾಡಿದ್ದೇನೆ. ಸದರಿ ಖರೀದಿ ಕರಾರು ಪತ್ರವನ್ನು ಗೀತಾ ಈಕೆ ಈ ಪ್ರಕರಣದಲ್ಲಿ ಸದರಿ ದಾಖಲಾತಿಯನ್ನು ಹಾಜರುಪಡಿಸಿದ್ದರ

ಕುರಿತಾಗಿ ನನಗೆ ಮಾಹಿತಿ ಇರುವದಿಲ್ಲ. ಗೀತಾ ನನ್ನ ಖಾಸ ಸಹೋದರಿಯಾಗಿರುತ್ತಾಳೆ ಅಂದರೆ ಸರಿ.

**17)** ನಾನು ಮತ್ತು ಗೀತಾ ದಾವಾ ಆಸ್ತಿಯನ್ನು ಎತ್ತಿಹಾಕಲೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಗೀತಾ ಈಕೆ ಪರವಾನಿಗೆಯ ಆಧಾರದ ಮೇಲೆ ಮಾತ್ರ ವಾಸವಾಗಿರುತ್ತಾಳೆ ಅಂದರೆ ಸರಿಯಲ್ಲ. ಸುನೀತಾ ಈಕೆ ಖರೀದಿ ಹಿದಂತಹ ಆಸ್ತಿಯ ಮೇಲೆ ನನ್ನ ಅಣ್ಣನಾದ ಪ್ರಕಾಶ ಮತ್ತು ಗೀತಾ ಇವರ ಹಕ್ಕು ಮತ್ತು ಹಿತಾಸಕ್ತಿ ಇರುವದಿಲ್ಲ ಅಂದರೆ ಸರಿಯಲ್ಲ. ಅದೇ ರೀತಿ ಪ್ರಕಾಶ ಈತನು ಖರೀದಿ ಹಿಡಿದಂತಹ ಆಸ್ತಿಯ ಮೇಲೆ ನಮ್ಮದು ಯಾವುದೇ ರೀತಿ ಹಕ್ಕು ಹಿತಾಸಕ್ತಿ ಇರುವದಿಲ್ಲ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸುನೀತಾ ಈಕೆಗೆ ಮಕ್ಕಳು ಇರುವದಿಲ್ಲ ಅಂದರೆ ಸರಿ.

**18)** 1 ನೇ ಪ್ರತಿವಾದಿ ಸುನೀತಾ ದಾವಾ ಅಸ್ತಿಗಳನ್ನು ಬಿಟ್ಟು ಬೇರೆ ಯಾವುದೇ ಅಸ್ತಿಗಳನ್ನು ಹೊಂದಿಲ್ಲ ಅಂದರೆ ಸರಿಯಲ್ಲ. ಸುನೀತಾ ಈಕೆಗೆ ದಾವಾ ಅಸ್ತಿಗಳನ್ನು ಹೊರತುಪಡಿಸಿ ಹೊನ್ನಾಳಿ ತಾಲೂಕಿನಲ್ಲಿ ಒಂದು ಗದ್ದೆ ಇರುತ್ತದೆ, ಆ ಗದ್ದೆಯ ಕುರಿತಾಗಿ ಆದಂತಹ ಖರೀದಿ ಪತ್ರ ಈ ಪ್ರಕರಣದಲ್ಲಿ ಹಾಜರುಪಡಿಸಿರುವದಿಲ್ಲ. ಸದರಿ ಗದ್ದೆಯ ಸರ್ವೆ ನಂಬರ ಮತ್ತು ವಿಸ್ತೀರ್ಣ ಗೊತ್ತಿರುವದಿಲ್ಲ. ದಾವಾ ಆಸ್ತಿಗಳನ್ನು ಹೊರತುಪಡಿಸಿ ಸುನೀತಾ ಈಕೆಗೆ ಯಾವುದೇ ಬೇರೆ ಆಸ್ತಿಗಳು ಇರುವದಿಲ್ಲ ಅಂದರೆ ಸರಿಯಲ್ಲ ಮತ್ತು ಆ ಕಾರಣದಿಂದ ನನ್ನ ತಾಯಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಕೊಡದೇ ಆಕೆಯಿಂದ ಅಧಿಕಾರ ಪಡೆದುಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಯಲ್ಲಿ ಗೀತಾ ವಾಸವಾಗಿದ್ದು ಆ ಮನೆಯನ್ನು ಬಿಡಿಸಿಕೊಳ್ಳಲು ನಾನು ಮತ್ತು ನನ್ನ ತಾಯಿ ಆಕೆಯ ಮೇಲೆ ಈ ಸುಳ್ಳು ಪ್ರಕರಣವನ್ನು ದಾಖಲುಪಡಿಸಿದ್ದೇನೆ ಅಂದರೆ ಸರಿಯಲ್ಲ.

**19)** 1 ನೇ ಪ್ರತಿವಾದಿ ಸುನೀತಾ ಈಕೆಯ ದಾವಾ ಆಸ್ತಿಗಳನ್ನು ತನ್ನ ಸ್ವಂತ ಹಣದಿಂದ ಖರೀದಿಗೆ ತೆಗೆದುಕೊಂಡಿದ್ದರೂ ಸಹ ಆ ವಿಷಯ ನನಗೂ ಮತ್ತು ನನ್ನ ತಾಯಿ ಜಯಶ್ರೀಗೆ ಇಬ್ಬರಿಗೂ ಗೊತ್ತಿದ್ದರೂ, 1 ನೇ ಪ್ರತಿವಾದಿ ಸುನೀತಾ ಇವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆ ದಾಖಲಿಸಿದ್ದೇನೆ ಅಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ.ಕೆ.ಎಲ್.ಇ ವಕೀಲರಿಂದ ಪ್ರತಿವಾದಿ **5(**ಎ**)** ರಿಂದ **5(**ಸಿ**)** ರ ಪರವಾಗಿಃ</u>

**20)** ನನಗೆ 5 ನೇ ಪ್ರತಿವಾದಿ ನಾಗರಾಜ ಈತನ ಪರಿಚಯ ಇರುತವದಿಲ್ಲ. ಸದರಿ ಪ್ರತಿವಾದಿ ನಂಬರಃ 5 ನಾಗರಾಜ ಈತನು ದಾವಾ ಶೆಡೂಲ್ "ಸಿ" ಆಸ್ತಿಯಲ್ಲಿ ಎಷ್ಟು ವರ್ಷಗಳಿಂದ ವಾಸವಾಗಿದ್ದಾನೆ ಎಂದು ನನಗೆ ಗೊತ್ತಿರುವದಿಲ್ಲ. ನಾಗರಾಜ ಈತನಿಗೆ ನನ್ನ ಅಣ್ಣನಾದ ಪ್ರಕಾಶ ಈತನು ದಾವಾ ಶಡ್ಯೂಲ್ "ಸಿ" ಆಸ್ತಿಯನ್ನು ದಿನಾಂಕಃ 01.01.2009 ರಂದು 1 ನೇ ಪ್ರತಿವಾದಿ ಸುನೀತಾ ಈಕೆಗೆ ಸೇರಿದ ಆಸ್ತಿಯನ್ನು ಖರೀದಿಗೆ ಕೊಟ್ಟಿದ್ದಾನೆ ಅಂದರೆ ಸರಿಯಲ್ಲ. ಅದೇ ರೀತಿ 1 ನೇ ಪರತಿವಾದಿ ಸುನೀತಾ ಈಕೆಯ ಹೆಸರಿನಲ್ಲಿರುವ ಆಸ್ತಿಯನ್ನು ಆಕೆಯ ಗಂಡನಾದ ಪ್ರಕಾಶ ಈತನು ದಿನಾಂಕಃ 07.08.2008 ರಂದು ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟಿದ್ದಾನೆ ಅಂದರೆ ಸರಿಯಲ್ಲ.

**21)** 5 ನೇ ಪ್ರತಿವಾದಿ ನಾಗರಾಜ ಈತನಿಗೆ ಮಾರಾಟ ಮಾಡಿದ ಆಸ್ತಿಯನ್ನು ಮೊದಲಿಗೆ ಖರೀದಿ ಕರಾರು ಪತ್ರ ಮಾಡಿಕೊಡುವಾಗ ಆ ಖರೀದಿ ಪತ್ರದಲ್ಲಿ ಕಬ್ಜಾ ಸಹಿತ ಇರುವದನ್ನು ಕಬ್ಜಾ ರಹಿತ ತಿದ್ದುಪಡಿಯನ್ನು ನಾವೇ ಮಾಡಿರುತ್ತೇವೆ ಅಂದರೆ ಸರಿಯಲ್ಲ. 5 ನೇ ಪ್ರತಿವಾದಿ ನಾಗರಾಜ ಈತನು ಯಾವ ತಿಂಗಳು ಮತ್ತು ಇಸ್ವಿಯಂದು ನನಗೆ ಗೊತ್ತಿರುವದಿಲ್ಲ ಅಂದರೆ ಸರಿ. ಸದರಿ ನಾಗರಾಜ ಈತನು ದಿನಾಂಕಃ 17.07.2021 ರಂದು ಮೃತಪಟ್ಟಿದ್ದಾನೆ ಅಂದರೆ ಆ ವಿಷಯ ನನಗೆ

ಗೊತ್ತಿರುವದಿಲ್ಲ. ಸದರಿ 5 ನೇ ಪ್ರತಿವಾದಿ ನಾಗರಾಜ ಮೃತಪಟ್ಟ ನಂತರ ಆತನ ಹೆಂಡತಿ ಮತ್ತು ಮಕ್ಕಳು ಎಲ್ಲರೂ ಸಹ 5 ನೇ ಪ್ರತಿವಾದಿ ನಾಗರಾಜ ಖರೀದಿ ಹಿಡಿದಂತಹ ಆಸ್ತಿಯಲ್ಲಿ ವಾಸ ಮಾಡಿಕೊಂಡು ಬರುತ್ತಿದ್ದಾರೆ ಅಂದರೆ ಸರಿಯಲ್ಲ.

**22)** 5 ನೇ ಪ್ರತಿವಾದಿ ನಾಗರಾಜ ಈತನಿಗೆ 1 ನೇ ಪ್ರತಿವಾದಿ ಸುನೀತಾ ಈಕೆಯ ಗಂಡ ಪ್ರಕಾಶ ಬರೆದುಕೊಟ್ಟಿದ್ದಾನೆ ಎಂದು ಹೇಳುವ ಬಾಡಿಗೆ ಕರಾರು ಪತ್ರವನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವದಿಲ್ಲ. 1 ನೇ ಪ್ರತಿವಾದಿ ಸುನೀತಾ ಈಕೆಯ ಗಂಡನಾದ ಪ್ರಕಾಶ ಈತನು ದಾವಾ ಆಸ್ತಿಯಲ್ಲಿ ಸದರಿ ನಾಗರಾಜ ಮತ್ತು ಅವರು ಕುಟುಂಬದವರು ವಾಸವಾಗಿರಲು ಖರೀದಿ ಕರಾರು ಪತ್ರವನ್ನು ಮತ್ತು ಬರಪಾಯಿ ಪತ್ರವನ್ನು ಬರೆದುಕೊಟ್ಟಿರುತ್ತಾನೆ ಅಂದರೆ ಸರಿಯಲ್ಲ. ನನ್ನ ಅಣ್ಣನಾದ ಪ್ರಕಾಶ ಈತನು ಜೀವಂತ ಇರುವಾಗ ಆತನು ಖರೀದಿಗೆ ಕೊಟ್ಟಂತಹ ಖರೀದಿ ಕರಾರು ಪತ್ರ ಬರೆದುಕೊಟಟಂತಹ ಆಸ್ತಿಯನ್ನು ದಿನಾಂಕಃ 02.01.2009 ರಂದು ಅದರ ಮೇಲೆ ಸಾಲವನ್ನು ಪಡೆದು 1 ನೇ ಪ್ರತಿವಾದಿ ಸುನೀತಾ ಈಕೆಗೆ ರೂ.1,00,000/- ಮುಂಗಡ ಹಣವನ್ನು ಚೆಕ್ ಮುಖಾಂತರ ಕೊಟ್ಟಿರುತ್ತಾನೆ ಅಂದರೆ ಸರಿಯಲ್ಲ.

**23)** ಅದೇ ರೀತಿ ಪ್ರಕಾಶ ಈತನು ನಾಗರಾಜ ಈತನಿಗೆ ದಿನಾಂಕಃ 05.01.2008 ನೇ ಇಸ್ವಿಗೆ ಖರೀದಿ ಕರಾರು ಪತ್ರ ಬರೆದುಕೊಟ್ಟಿರುತ್ತಾನೆ ಅಂದರೆ ಸರಿಯಲ್ಲ. ಸರ್ವೆ ನಂಬರಃ 173 ಬಿ/2 ಅದರಲ್ಲಿ 4 ಆರ್.ಸಿ.ಸಿ ಕಟ್ಟಡಗಳಿರುತ್ತವೆ ಅಂದರೆ ಸರಿಯಲ್ಲ, ಆದರೆ ಸಾಕ್ಷಿಯು ಮುಂದುವರೆದು ಸದರಿ ಆಸ್ತಿಯಲ್ಲಿ 5 ಆರ್.ಸಿ.ಸಿ ಕಟ್ಟಡಗಳು ಇರುತ್ತವೆ ಎಂದು ನುಡಿಯುತ್ತಾರೆ. ಸರ್ವೆ ನಂಬರಃ 173 ಬಿ/3 ಈ ಆಸ್ತಿಯಲ್ಲಿ 4 ಆರ್.ಸಿ.ಸಿ ಕಟ್ಟಡಗಳು ಇರುತ್ತವೆ ಅಂದರೆ ಸರಿ. ಸರ್ವೆ ನಂಬರಃ 173 ಬಿ/2 ಈ ಆಸ್ತಿಯಲ್ಲಿರುವಂತಹ 4 ಕಟ್ಟಡಗಳಲ್ಲಿ ಮೂರು ಮನೆಗಳನ್ನು ಪಾಟೀಲ್ ಎನ್ನುವವರಿಗೆ 1 ನೇ ಪ್ರತಿವಾದಿಯ ಸುನೀತಾ ಈಕೆಯ ಗಂಡನಾದ ಪ್ರಕಾಶ ಈತನು

ಖರೀದಿಗೆ ಕೊಟ್ಟಿದ್ದಾನೆ ಅಂದರೆ ಸರಿಯಲ್ಲ. ಅದೇ ರೀತಿ ಪ್ರಕಾಶ ಈತನು ಸರ್ವೆ ನಂಬರಃ 173 ಬಿ/3 ಈ ಆಸ್ತಿಯಲ್ಲಿರುವಂತಹ 4 ಕಟ್ಟಡಗಳ ಪೈಕಿ ಒಂದು ಆರ್.ಸಿ.ಸಿ ಮನೆಯನ್ನು 5 ನೇ ಪ್ರತಿವಾದಿಯ ತಾಯಿಗೆ ಖರೀದಿಗೆ ಕೊಟ್ಟಿರುತ್ತಾನೆ ಅಂದರೆ ಸರಿಯಲ್ಲ. ಸದರಿ ಆಸ್ತಿಯು ಶೆಡ್ಯೂಲ್ ಸಿ ಆಸ್ತಿಯಂತೆ ಇರುತ್ತದೆ ಂದರೆ ಸರಿಯಲ್ಲ. ಸದರಿ ಆಸ್ತಿಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲದೇ ಇದ್ದರೂ ನಾನು ಆ ಕುರಿತಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 5 ನೇ ಪ್ರತಿವಾದಿ ನಾಗರಾಜ ಈತನಿಗೆ ಈ ಪ್ರಕರಣದಲ್ಲಿ ತೊಂದರೆ ಕೊಡಲು ಆತನನ್ನು ಸುಳ್ಳಾಗಿ ಪ್ರತಿವಾದಿ ನಂಬರಃ 5 ಎಂದು ನಮೂದಿಸಿ ಈ ಸುಳ್ಳು ಪ್ರಕರಣವನ್ನು ದಾಖಲುಪಡಿಸಿದ್ದೇವೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ನಾಗರಾಜ ಈತನಿಗೆ ಸರ್ವೆ ನಂಬರಃ 173 ಬಿ/3 ಈ ಆಸ್ತಿಯಲ್ಲಿರುವಂತಹ ಮೂರು ಕಟ್ಟಡಗಳನ್ನು ಕೇವಲ ಖರೀದಿ ಕರಾರು ಪತ್ರ ಬರೆದುಕೊಟ್ಟು ನಂತರದಲ್ಲಿ ಯಾವುದೇ ನೊಂದಾಯಿತ ಖರೀದಿ ಪತ್ರವನ್ನು ಬರೆದುಕೊಡದೇ 5 ನೇ ಪ್ರತಿವಾದಿಗೆ ತೊಂದರೆ ಕೊಡುತ್ತಿದ್ದೇವೆ ಅಂದರೆ ಸರಿಯಲ್ಲ. ಸರ್ವೆ ನಂಬರಃ 173 ಬಿ/3 ಈ ಆಸ್ತಿಯ ಸಂಪೂರ್ಣ ಚೆಕ್ಕುಬಂದಿ ಹೇಳಲು ಬರುವದಿಲ್ಲ.

**24)** ದಿನಾಂಕಃ 15.06.1996 ನೇ ಇಸ್ವಿಯಂದು ಸರ್ವೆ ನಂಬರಃ 173 ಬಿ/2 ಈ ಆಸ್ತಿಯ ಪಶ್ಚಿಮ ಭಾಗದ ಆಸ್ತಿಗಳನ್ನು ನನ್ನ ಅಣ್ಣನಾದ ಪ್ರಕಾಶ ಈತನು ನೊಂದಾಯಿತ ಖರೀದಿ ಪತ್ರದ ಮುಖಾಂತರ ಖರೀದಿ ಮಾಡಿರುತ್ತಾನೆ ಅಂದರೆ ಆ ವಿಷಯ ನನಗೆ ಗೊತ್ತಿರುವದಿಲ್ಲ. ದಿನಾಂಕಃ 18.06.1996 ನೇ ಇಸ್ವಿಯಂದು ಸರ್ವೆ ನಂಬರಃ 173 ಬಿ/3 ಈ ಆಸ್ತಿಯ ಪೂರ್ವ ಭಾಗದ 4 ಆರ್.ಸಿ.ಸಿ ಮನೆಗಳ ಆಸ್ತಿಯನ್ನು 1 ನೇ ಪ್ರತಿವಾದಿ ಶ್ರೀಮತಿ ಸುನೀತಾ ಈಕೆಯ ಹೆಸರಿನಲ್ಲಿ ಆಕೆಯ ಗಂಡನಾದ ನನ್ನ ಅಣ್ಣ ಪ್ರಕಾಶ ಈತನು ಖರೀದಿಗೆ ತೆಗೆದುಕೊಂಡಿರುತ್ತಾನೆ ಅಂದರೆ ಆ ವಿಷಯ ನನಗೆ ಗೊತ್ತಿರುವದಿಲ್ಲ. ಸರ್ವೆ ನಂಬರಃ 173 ಬಿ/2 ಈ ಆಸ್ತಿಯಲ್ಲಿರುವಂತಹ 5 ಕಟ್ಟಡಗಳ ಪೈಕಿ ಮೂರು

ಮನೆಗಳನ್ನು ಪಾಟೀಲ ಎನ್ನುವವರಿಗೆ ಮತ್ತು ಒಂದು ಮನೆ ಬಳಿಗಾರ ಎನ್ನುವವರಿಗೆ ನನ್ನ ಅಣ್ಣನಾದ ಪ್ರಕಾಶ ಈತನು ಖರೀದಿಗೆ ಕೊಟ್ಟಿರುತ್ತಾನೆ ಅಂದರೆ ಆ ವಿಷಯ ನನಗೆ ಗೊತ್ತಿರುವದಿಲ್ಲ. ಸದರಿ ಆಸ್ತಿಯಲ್ಲಿ ನನ್ನ ಅಣ್ಣನಾದ ಪ್ರಕಾಶ ಈತನಿಗೆ ಕೇವಲ ಒಂದೇ ಮನೆ ಉಳಿದಿರುತ್ತದೆ ಅಂದರೆ ಸರಿಯಲ್ಲ.

**25)** ಸರ್ವೆ ನಂಬರಃ 173 ಬಿ/3 ಈ ಆಸ್ತಿಯಲ್ಲಿ 4 ಮನೆಗಳಿದ್ದು ಅದರಲ್ಲಿ ಒಂದು ಮನೆಯನ್ನು ನನ್ನ ಸಹೋದರಿಯಾದ ಗೀತಾ ಇವರಿಗೆ, 2 ನೇ ಮನೆಯನ್ನು ಮಹಾರಾಜಪೇಟ ಇವರಿಗೆ ಖರೀದಿಗೆ ಕೊಟ್ಟಿರುತ್ತಾರೆ ಅಂದರೆ ಸರಿ. 3 ನೇ ಮನೆಯನ್ನು ಪ್ರತಿವಾದಿ 5 ನಾಗರಾಜ ಇವರಿಗೆ ಖರೀದಿಗೆ ಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ಇರುವಂತಹ 1 ಮನೆಯಲ್ಲಿ ಮಾತ್ರ 1 ನೇ ಪ್ರತಿವಾದಿ ಸುನೀತಾ ಈಕೆ ವಾಸವಾಗಿರುತ್ತಾಳೆ ಅಂದರೆ ಸರಿ. ನನ್ನ ಅಣ್ಣನಾದ ಪ್ರಕಾಶ ಈತನು ಆತನ ಮರಣದ ನಂತರ ವಾದಿಯರು ಪ್ರತಿವಾದಿಗಳ ಆಸ್ತಿಗಳನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಂಡಿರುತ್ತಾರೆ ಅಂದರೆ ಸರಿಯಲ್ಲ. ಸದರಿ ಸರ್ವೆ ನಂಬರಃ 173/2 ಆಸ್ತಿಯಲ್ಲಿ ಉಳಿದಂತಹ ಒಂದು ಕಟ್ಟಡವನ್ನು ಕೇವಲ ಪ್ರತಿವಾದಿ ನಂಬರಃ 1 ಸುನೀತಾ ಈಕೆಯು ಅದರಲ್ಲಿ ವಾಸವಾಗಿರುತ್ತಾಳೆ ಅಂದರೆ ಸರಿ. ಸದರಿ ಸರ್ವೆ ನಂಬರಃ 173 ಬಿ/3 ಶೆಡ್ಯೂಲ್ ಸಿ ಆಸ್ತಿಯಲ್ಲಿ 5 ನೇ ಪ್ರತಿವಾದಿ ನಾಗರಾಜ ಈತನಿಗೆ ನನ್ನ ಅಣ್ಣನಾದ ಪ್ರಕಾಶ ಈತನು ಮಾರಾಟ ಮಾಡಿರುತ್ತಾನೆ ಅಂದರೆ ಸರಿಯಲ್ಲ. ನಾನು 5 ನೇ ಪ್ರತಿವಾದಿಯಾದಂತಹ ನಾಗರಾಜ ಈತನಿಗೆ ತೊಂದರೆ ಕೊಡುವ ಉದ್ದೇಶದಿಂದ ದಾವಾ ಆಸ್ತಿಗಳ ಕುರಿತಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸರ್ವೆ ನಂಬರಃ 173 ಬಿ/2 ಮತ್ತು ಸರ್ವೆ ನಂಬರಃ 173 ಬಿ/3 ಎರಡೂ ಆಸ್ತಿಗಳನ್ನು ನನ್ನ ಅಣ್ಣನಾದ ಪ್ರಕಾಶ ಈತನು ಆತನ ಜೀವಿತ ಕಾಲದಲ್ಲಿ ತನ್ನ ಸ್ವಂತ ಹಣದಿಂದ ಖರೀದಿ ಮಾಡಿಕೊಂಡಿರುತ್ತಾನೆ ಅಂದರೆ ಸರಿಯಲ್ಲ. ನನ್ನ ಅಣ್ಣನಾದ ಪ್ರಕಾಶ ಈತನು ನಮ್ಮ

ತಂದೆ ತಾಯಿ ಮೃತಪಟ್ಟ ನಂತರ ಆತನು ಹಾವೇರಿಯಲ್ಲಿ ಒಂದು ಅಂಗಡಿಯಲ್ಲಿ ರೇಡಿಯೋ ರಿಪೇರಿ ಮಾಡಿಕೊಂಡು ಪ್ರತ್ಯೇಕವಾಗಿ ಜೀವನ ಸಾಗಿಸುತ್ತಿದ್ದ ಅಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಗಳಲ್ಲಿ ನಾನು ಮತ್ತು ಇನ್ನಿತರೇ ಕುಟುಂಬದ ಸದಸ್ಯರು ಸುಮಾರು ವರ್ಷದಿಂದ ಜಂಟಿಯಾಗಿ ವಾಸಿಸುತ್ತಾ ಬರುತ್ತಿದ್ದು, ಆ ಕುರಿತಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ.ಎಂ.ಬಿ.ಎನ್ ವಕೀಲರಿಂದಃ **6** ನೇ ಪ್ರತಿವಾದಿಯರ ಪರವಾಗಿಃ</u>

**26)** ಈ ಪ್ರಕರಣದಲ್ಲಿ ದಾವಾ ಆಸ್ತಿಯ ಶೆಡ್ಯೂಲ್ "ಡಿ" ಮತ್ತು "ಇ" ಆಸ್ತಿಗಳನ್ನು ನನ್ನ ಅಣ್ಣನಾದ ಪ್ರಕಾಶ ಮತ್ತು ಆತನ ಹೆಂಡತಿ ಸುನೀತಾ ಇಬ್ಬರೂ ಕೂಡಿ ಮೇಲೆ ಹೇಳಿದ ದಾವಾ ಆಸ್ತಿಯ ಶೆಡ್ಯೂಲ್ "ಡಿ" ಮತ್ತು "ಇ" ಆಸ್ತಿಗಳನ್ನು 6 ನೇ ಪ್ರತಿವಾದಿಯಾದಂತಹ ಶ್ರೀಮತಿ ಗೀತಾ ಇವಳಿಗೆ ಖರೀದಿ ಕರಾರು ಪತ್ರ ಬರೆದುಕೊಟ್ಟಿರುತ್ತಾರೆ ಅಂದರೆ ಸರಿ. ಸದರಿ ಆಸ್ತಿಗಳ ಕುರಿತಾಗಿ ಪ್ರಕಾಶ ಮತ್ತು 1 ನೇ ಪ್ರತಿವಾದಿ ಸುನೀತಾ ಇಬ್ಬರೂ ಸೇರಿ ಸದರಿ ಕಟ್ಟಡವನ್ನು ಬೇರೆಯವರಿಗೆ ಅಂದರೆ 6 ನೇ ಪ್ರತಿವಾದಿ ಗೀತಾ ಇವರಿಗೆ ರೂ.3,50,000/- ರೂಗಳಿಗೆ ಖರೀದಿ ಕರಾರು ಪತ್ರ ಅಗಿದ್ದು, ಅದರ ಪೈಕಿ ಮುಂಗಡ ಹಣವಾಗಿ ರೂ.3,25,000/- ರೂಗಳನ್ನು ಪಡೆದುಕೊಂಡಿದ್ದರು ಅಂದರೆ ಸರಿ. ಮೇಲೆ ಹೇಳಿದ ಆಸ್ತಿಗಳಲ್ಲಿ 2004 ರಿಂದ ಸದರಿ ಅಸ್ತಿಗಳಲ್ಲಿ 6 ನೇ ಪ್ರತಿವಾದಿಯಾದಂತಹ ಗೀತಾ ಈಕೆ ವಾಸಿಸುತ್ತಾ ಈಗಲೂ ಸಹ ಬರುತ್ತಿದ್ದಾಳೆ ಅಂದರೆ ಸರಿ.

**27)** ಮೇಲೆ ಹೆಳಿದ ದಾವಾ ಶೆಡ್ಯೂಲ್ "ಡಿ" ಮತ್ತು "ಇ" ಆಸ್ತಿಗಳಿಗೆ ಸಂಬಂದಪಟ್ಟ ಖರೀದಿ ಕರಾರು ಪತ್ರ ಬರೆದುಕೊಡುವಾಗ ರೂ.3,50,000/- ಬಾಕಿ ಇದ್ದ ರೂ.25,000/- ಗಳನ್ನು 1 ನೇ ಪ್ರತಿವಾದಿ ಸುನೀತಾ ಇವರಿಗೆ 6 ನೇ ಪ್ರತಿವಾದಿ ಕೊಟ್ಟಿರುತ್ತಾರೆ ಅಂದರೆ ಸರಿ. ಸದರಿ ದಿನಾಂಕದಂದು 1 ನೇ ಪ್ರತಿವಾದಿ ಸುನೀತಾ 6 ನೇ

ಪ್ರತಿವಾದಿಯಾದಂತಹ ಗೀತಾ ಇವರ ಹೆಸರಿನಲ್ಲಿ ಖರೀದಿ ಕರಾರು ಪತ್ರ ಬರೆದುಕೊಟ್ಟಿರುತ್ತಾರೆ ಅಂದರೆ ಸರಿ. ದಾವಾ ಶೆಡೂಲ್ "ಡಿ" ಮತ್ತು "ಇ" ಆಸ್ತಿಗಳಲ್ಲಿ ಇವತ್ತಿಗೂ ಸಹ ಬ್ಯಾಂಕುಗಳ ಬೋಜಾ ಇರುತ್ತದೆ ಅಂದರೆ ಸರಿ.

ಈ ಪ್ರಕರಣದಲ್ಲಿ ಪ್ರತಿವಾದಿ ನಂಬರಃ **2** ರಿಂದ **4** ಇವರು ಪ್ರತಿವಾದ ಪತ್ರ ಸಲ್ಲಿಸದೇ ಇರುವದರಿಂದ ಪ್ರತಿವಾದಿ **2** ರಿಂದ **4** ಇವರ ಪರವಾಗಿ ಪಾಟೀ ಸವಾಲು ಇರುವದಿಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲಾ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ, ಹಾವೇರಿ.